# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.

## ಸಿ.ಸಿ. ನಂ. 471/2016

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ತಿಪ್ಪೇಸ್ವಾಮಿ | ಸಿ.ಡಬ್ಲ್ಯೂ–08 |
| ತಂದೆ ಹೆಸರು | : | ನರಸಿಂಹಪ್ಪ | ಪಿ.ಡಬ್ಲ್ಯೂ–06 |
| ವಯಸ್ಸು | : | 62 ವರ್ಷ | |
| ಉದ್ಯೋಗ | : | ನಿವೃತ್ತ ಪಿ ಎಸ್ ಐ | |
| ವಾಸಸ್ಥಳ | : | ಚಳ್ಳಕೆರೆ | ದಿಃ 05–02–2026. |

## ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ

ನಾನು 2012 ರಿಂದ 2018 ರವರೆಗೆ ಚಳ್ಳಕೆರೆ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 15.07.2015 ರಂದು ಬೆಳಿಗ್ಗೆ 09–00 ಗಂಟೆ ಸಮಯದಲ್ಲಿ ನಾನು, ಚಾಸಾ–9 ರಿಂದ 12 ರವರು ಪೊಲೀಸ್ ಠಾಣೆಯಲ್ಲಿದ್ದಾಗ ಚಾಸಾ–1 ರವರು ನಮ್ಮನ್ನು ಕರೆದು ದಿನಾಂಕ 14.07.2015 ರಂದು ಸಂಜೆ 07–00 ಗಂಟೆ ಸಮಯದಲ್ಲಿ ಚಾಸಾ–1 ರವರು ಠಾಣೆಯಲ್ಲಿದ್ದಾಗ ಬಾತ್ಮಿದಾರರಿಂದ ಚಳ್ಳಕೆಟೆ ಟೌನ್ ವಿಠ್ಠಲ ನಗರದ ವಾಸಿಯಾದ ಆರೋಪಿ ಕೆಲವು ದಿನಗಳಿಂದ ಮೀಟರ್ ಬಡ್ಡಿ ವ್ಯವಹಾರವನ್ನು ನಡೆಸುತ್ತಿದ್ದಾರೆ , ಇವರು ಸಾರ್ವಜನಿಕರಿಗೆ ಹಣವನ್ನು ಸಾಲವಾಗಿ ನೀಡಿ ಸಾಲಕ್ಕೆ ಬದಲಾಗಿ ಪ್ರಾಂಸರಿ ನೋಟ್, ಚೆಕ್ ಗಳನ್ನು ಪಡೆದು ಕೇಳಿದಷ್ಟು ಬಡ್ಡಿಯನ್ನು ಕೊಡದೇ ಇದ್ದರೆ ಸದರಿ ಪ್ರಾಂಸರಿ ಹಾಗೂ ಚೆಕ್ಕುಗಳಲ್ಲಿ ಹೆಚ್ಚಿನ ಬಡ್ಡಿ ಹಣವನ್ನು ನಮೂದಿಸಿಕೊಂಡು ಸಾಲಗಾರರಿಗೆ ದೌರ್ಜನ್ಯ ಎಸಗಿ ಹಣವನ್ನು ವಸೂಲಿ ಮಾಡುತಿದ್ದಾರೆ ಎಂದು ಬಾತ್ಮಿ ಬಂದ ವಿಚಾರವನ್ನು ತಿಳಿಸಿರುತ್ತಾರೆ.

ತದ ನಂತರ ಚಾಸಾ–1 ರವರು ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆದು ಕೊಂಡಿರುವುದರಿಂದ ನಮ್ಮನ್ನು ದಾಳಿಗೆ ಸಹಕರಿಸಲು ಕರೆದಿರುತ್ತಾರೆ. ನಂತರ ಚಾಸಾ–1 ರವರು ಚಾಸಾ–2 ಮತ್ತು 3 ರವರನ್ನು ಠಾಣೆಗೆ ಪಂಚರಾಗಿ ಬರಮಾಡಿಕೊಂಡು , ಸದರಿಯವರಿಗೆ ಬಾತ್ಮಿ ಬಂದ ವಿಚಾರವನ್ನು ತಿಳಿಸಿ , ದಾಳಿಯು ಸಮಯದಲ್ಲಿ ಪಂಚರಾಗಿ ಸಹಕರಿಸಲು ಕೋರಿಕೊಂಡ ಮೇರೆಗೆ ಸದರಿಯವರು ಒಪ್ಪಿಕೊಂಡಿರುತ್ತಾರೆ. ಚಾಸಾ–1 ರವರು ಚಾಸಾ–2, 3 , 9 ರಿಂದ 12 ಮತ್ತು ನನ್ನನ್ನು ಇಲಾಖಾ ವಾಹನದಲ್ಲಿ ಚಳ್ಳಕೆರೆ ವಿಠ್ಠಲನಗರದ ಆರೋಪಿಯ ಮನೆಯ ಹತ್ತಿರ

ಕರೆದುಕೊಂಡು ಹೋಗಿದ್ದು , ಚಾಸಾ–1 ರವರು ಆರೋಪಿಯ ಮನೆಯ ಕಾಲಿಂಗ್ ಬೆಲ್ ಅನ್ನು ಒತ್ತಿದಾಗ ಆರೋಪಿಯು ಮನೆಯಿಂದ ಹೊರಗೆ ಬಂದಿರುತ್ತಾರೆ. ಚಾಸಾ–1 ರವರು ಆರೋಪಿಗೆ ಎಲ್ಲಾ ವಿಚಾರವನ್ನು ತಿಳಿಸಿ , ಆರೋಪಿಯ ಮನೆಯನ್ನು ಶೋದನೆ ಮಾಡಲು ಶೋಧನಾ ವಾರೆಂಟ್ ಪಡೆದಿರುವುದಿರಿಂದ ಶೋದನೆ ಮಾಡಲು ಸಹಕರಿಸಬೇಕಾಗಿ ಆರೋಪಿಗೆ ತಿಳಿಸಿರುತ್ತಾರೆ. ನಂತರ ಚಾಸಾ–1 ರವರು ನಮ್ಮೊಂದಿಗೆ ಆರೋಪಿಯ ಮನೆಯನ್ನು ಪ್ರವೇಶಿಸಿ ಶೋಧಿಸಿದಾಗ ಮನೆಯಲ್ಲಿ ಪ್ರಾಂಸರಿ ನೋಟ್ , ಎನ್ ಎಸ್ ಸಿ ಬಾಂಡ್ ಮತ್ತು ಚೆಕ್ಕುಗಳು ದೊರೆತಿರುತ್ತವೆ. ಸದರಿ ದಾಖಲೆಗಳನ್ನು ಪಂಚರ ಸಮಕ್ಷಮ ಬೆಳಿಗ್ಗೆ 09–15 ರಿಂದ 12–15 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ಜಪ್ತು ಪಡಿಸಿಕೊಂಡಿರುತ್ತಾರೆ.

ನಂತರ ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಹಿಂದಿರುಗಿರುತ್ತೇವೆ.

ಸಾಕ್ಷಿಗೆ ನಿಪಿ.1 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿಃ 1(ಸಿ) ಅಂತ ಗುರುತಿಸಲಾಯಿತು.

ಸಾಕ್ಷಿಯು ನಿಪಿ.21 ರಿಂದ 23 ರ ದಾಖಲೆಗಳನ್ನು ನೋಡಿ ಮಹಜರ್ ಸಮಯದಲ್ಲಿ ಜಪ್ತು ಪಡಿಸಿಕೊಂಡ ದಾಖಲೆಗಳು ಎಂದು ಗುರುತಿಸಿರುತ್ತಾರೆ.

ಈ ಬಗ್ಗೆ ನಾನು ತನಿಖಾಧಿಕಾರಿಗಳಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರುತಿಸುವುದಾಗಿ ನುಡಿಯುತ್ತಾರೆ

**(ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಆತನನ್ನು ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇಲ್ಲ ಅಂತ ಆರೋಪಿ ಪರ ವಕೀಲರು ಸಮ್ಮತಿಸಿರುತ್ತಾರೆ.** )

**<u>ಪಾಟೀ ಸವಾಲುಃ ಶ್ರೀ ಎಸ್ ಡಿ ಹೆಚ್., ಆರೋಪಿ ಪರ ವಕೀಲರಿಂದಃ</u>**

ಶೋಧನೆ ಮಾಡಿದ ಮನೆಯ ಚಕ್ಕುಬಂದಿಯನ್ನು ಹೇಳಲು ಆಗುವುದಿಲ್ಲ. ಶೋಧನೆ ಮಾಡಿದ ಮನೆ ಯಾರಿಗೆ ಸೇರಿರುತ್ತದೆ ಎಂದು ನನಗೆ ಗೊತ್ತಿಲ್ಲ. ಎಷ್ಟು ಪ್ರಾಂಸರಿ ನೋಟ್, ಚೆಕ್ಕುಗಳು ಹಾಗೂ ಎನ್ ಎಸ್ ಸಿ ಬಾಂಡ್ ಗಳನ್ನು ಜಪ್ತು ಪಡಿಸಿಕೊಂಡಿರುತ್ತಾರೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಜಪ್ತು ಪಡಿಸಿಕೊಳ್ಳಲಾಗಿದೆ ಎನ್ನಲಾದ ದಾಖಲೆಗಳಲ್ಲಿ ಶೇ. 4 ಬಡ್ಡಿ ದರದ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಶೇ.3 ಎಂದು ನಮೂದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಪಂಚರ ಸಮಕ್ಷಮ ಮಹಜರ್ ಕ್ರಮ ಜರುಗಿಸಲಾಗಿರುತ್ತದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

ಆರೋಪಿಯ ಮನೆಗೆ ದಾಳಿಗೆ ಹೋದಾಗ ಎಷ್ಟು ಜನರು ಇದ್ದರು ಎಂದು ಹೇಳಲು ಆಗುವುದಿಲ್ಲ. ನಿಪಿ.21 ರಿಂದ 27 ರ ದಾಖಲೆಗಳನ್ನು ಬೆಡ್ ರೂಮಿನ ವಾಲ್ ಡ್ರೂಪ್ ನಲ್ಲಿದ್ದ ಒಂದು ಫೈಲ್ ನಲ್ಲಿ ಇಡಲಾಗಿತ್ತು. ನಿಪಿ.24 ಆರೋಪಿಗೆ ತಾಯಿಗೆ ಸಂಬಂಧಿಸಿದ ದಾಖಲೆಯಾಗಿರುತ್ತದೆ ಎಂದರೆ ಸಾಕ್ಷಿಯು ಆರೋಪಿಯು ಆತನ ತಾಯಿಯ ಹೆಸರಿನಲ್ಲಿ ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.24 ರಲ್ಲಿ ಆರೋಪಿಯ ಹೆಸರು ಇರುವುದಿಲ್ಲ ಎಂದರೆ ಸರಿ. ಜಪ್ತು ಪಡಿಸಿಕೊಂಡಿರುವ ದಾಖಲೆಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಬೇರೆ ದಾಖಲೆಗಳು ಆರೋಪಿಯ ಹೆಸರಿನಲ್ಲಿರುತ್ತವೆ ಎಂದು ನುಡಿಯುತ್ತಾರೆ. ದಾಳಿ ಮಾಡಿದ ಮನೆಯು ಆರೋಪಿತನಿಗಾಗಲೀ ಅಥವಾ ಆತನ ತಂದೆಗಾಗಲೀ ಸೇರಿದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾಳಿ ಮಾಡಿದ ಮನೆಯು ವೆಂಕಟೇಶ್ ಬಿನ್ ಪ್ರಹ್ಲಾದ್ ರವರಿಗೆ ಸೇರಿದ ಮನೆಯಾಗಿದ್ದು, ಅವರೇ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮಂದುವರಿದು ಆರೋಪಿಯು ಸದರಿ ಮನೆಯಲ್ಲಿ ಬಾಡಿಗೆಗೆ ಇದ್ದರು ಎಂದು ನುಡಿಯುತ್ತಾರೆ.

ನಿಪಿ.21 ಆರೋಪಿಯ ಸ್ವಂತ ಚೆಕ್ ಆಗಿರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. ನಿಪಿ.23 ರಲ್ಲಿ ಆರೋಪಿ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ.23 ಚಾಸಾ-5 ರವರಿಗೆ ಸಂಬಂಧಿಸಿದ್ದು, ನಿಪಿ.23 ಕ್ಕೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.25 ರಲ್ಲಿ ಯಾರು ಸಹಿ ಮಾಡಿರುತ್ತಾರೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸಾಲ ಮರು ಪಾವತಿಸದೇ ಇದ್ದಾಗ ಅದನ್ನು ಭರ್ತಿ ಮಾಡಿಕೊಳ್ಳುವ ಸಲುವಾಗಿ ಅದನ್ನು ಖಾಲಿ ಬಿಡಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ.25 ರಲ್ಲಿ ಸದರಿ ವಿಚಾರವನ್ನು ನಮೂದಿಸದೇ ಇದ್ದರೂ ನಾನೇ ಅದನ್ನು ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ.21 ರಿಂದ 27 ದಾಖಲೆಗಳು ಆರೋಪಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ದಾಖಲೆಗಳನ್ನು ಠಾಣೆಯಲ್ಲಿ ಸೃಷ್ಟಿಸಿಕೊಂಡು ಮೇಲಾಧಿಕಾರಿಗಳ ಮಾತು ಕೇಳಿ , ಆರೋಪಿಯು ಯಾವುದೇ ಬಡ್ಡಿ ವ್ಯಾವಹಾರ ಮಾಡದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿವ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ